# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಶೆಟ್ಟಿಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.13/ಪಿಆರ್/ /2022-23 ದಿನಾಂಕ: 04.07.2022

**ಮಲ್ಲಸಂದ್ರ ವಾರ್ಡ್-13 ರ ವಾರ್ಡ್ ಸಭೆಯ (Ward Decentralized Traige and Emergency Response (DETER) Committee for COVID-19) ನಡವಳಿ**

ದಿನಾಂಕ: 04.07.2022 ರಂದು ಬೆಳಗ್ಗೆ 11.00 ಗಂಟೆಗೆ ಶ್ರೀ.ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಮಲ್ಲಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದವರು:**

1. ಶ್ರೀ. ಎಸ್.ಎಲ್. ವಿಶ್ವನಾಥ್, ವಾರ್ಡ್ ಕಮಿಟಿ ನೋಡೆಲ್ ಆಫೀಸರ್, ವಾರ್ಡ್ ನಂ.13 ಮಲ್ಲಸಂದ್ರ.
2. ಶ್ರೀ ಸಿ.ಎನ್. ಜಗದೀಶ್, ಸಹಾಯಕ ಅಭಿಯಂತರರು, ವಾರ್ಡ್ ನಂ.13 ಮಲ್ಲಸಂದ್ರ.
3. ಶ್ರೀ ಡಾ|| ದಯಾನಂದ್ ಜಿ.ಆರ್, ಆರೋಗ್ಯ ವೈದ್ಯಾಧಿಕಾರಿಗಳು, ವಾರ್ಡ್ ನಂ.13 ಮಲ್ಲಸಂದ್ರ.
4. ಶ್ರೀ ಪಾರ್ಥ, ಹಿರಿಯ ಆರೋಗ್ಯ ಪರಿವೀಕ್ಷಕರು, ಮಲ್ಲಸಂದ್ರ
5. ಶ್ರೀ ಆದರ್ಶ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ ತಿಮ್ಮಯ್ಯ, ಬೆಸ್ಕಾಂ.
7. ಶ್ರೀ ಕೆ.ಎನ್. ರಾಜಪ್ಪ, ರೇಂಜ್ ಫಾರೆಸ್ಟ್ ಆಫೀಸರ್
8. ಶ್ರೀ ಶಿವಲಿಂಗೇಗೌಡ, ತೋಟಗಾರಿಕಾ ಇಲಾಖೆ
9. ಶ್ರೀ ಸಂಜೀವಪ್ಪ, ಅರಣ್ಯ ಇಲಾಖೆ.
10. ಶ್ರೀ ರಾಜ್‌ಕುಮಾರ್, ಕಂದಾಯ ಪರಿವೀಕ್ಷಕರು
11. ಶ್ರೀ ಉಮೇಶ್, ಬೋರ್‌ವೆಲ್ ವಿಭಾಗ.
12. ಶ್ರೀ ಬೈಲಪ್ಪ ರವರು ವಾರ್ಡ್ ಸಮಿತಿ ಸದಸ್ಯರು.
13. ಶ್ರೀ ಲಕ್ಷ್ಮೀಪತಿ, ರವರು ವಾರ್ಡ್ ಸಮಿತಿ ಸದಸ್ಯರು.
14. ಶ್ರೀ ಮಹಾದೇವ್ ಎಂ. ಮಾರ್ಷಲ್, ಮಲ್ಲಸಂದ್ರ.
15. ಶ್ರೀ ಅಂಬರೀಶ್ ಡಿ.ಎಲ್. ವಾರ್ಡ್ ಸಮಿತಿ ಸದಸ್ಯರು.
16. ಶ್ರೀ ಗೋಪಾಲ್, ವಾರ್ಡ್ ಸಮಿತಿ ಸದಸ್ಯರು.

ಶ್ರೀ ಸಿ.ಎನ್. ಜಗದೀಶ್, ವಾರ್ಡ್ ಕಾರ್ಯದರ್ಶಿರವರು ವಾರ್ಡ್ ಸಭೆಯಲ್ಲಿ ನೋಡೆಲ್ ಅಧಿಕಾರಿಯಾದ ವಿಶ್ವನಾಥ್ ರವರಿಗೆ ಹಾಗೂ ಸಭೆಯಲ್ಲಿ ಹಾಜರಿದ್ದ ವಾರ್ಡ್ ಸದಸ್ಯರುಗಳಿಗೆ ಅಧಿಕಾರಿಗಳಿಗೆ ಮತ್ತು ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಕಾರ್ಯದರ್ಶಿಗಳು ಮಾತನಾಡಿ ಈ ಹಿಂದಿನ ಸಭೆಯಲ್ಲಿ ನಡೆದ ನಡುವಳಿಗಳ ಬಗ್ಗೆ ಮತ್ತು ನಡುವಳಿಗಳಿಗೆ ಪೂರಕವಾಗಿ ತೆಗೆದುಕೊಂಡ ಕ್ರಮದ ಬಗ್ಗೆ ವಿವರಿಸಿದರು.

ದಿನಾಂಕ: 04.07.2022 ರಂದು ನಡೆದ ಸಭಾ ನಡವಳಿಗಳು

1. ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಚರಂಡಿ ಸ್ಲ್ಯಾಬ್‌ಗಳನ್ನು ಹಾಕಲು ಕೋರಿರುವ ವಿಷಯ:
   ಉತ್ತರ:- ವಾರ್ಡ್‌ನಲ್ಲಿ ಮುಂದೆ ಕೈಗೊಳ್ಳುವ ಕಾಮಗಾರಿಗಳಲ್ಲಿ ಸೇರಿಸಿ ಕೈಗೊಳ್ಳಲು ನಿರ್ಧರಿಸಲಾಯಿತು.

2. ನ್ಯೂ ಕೇಂಬ್ರಿಡ್ಜ್ ಸ್ಕೂಲ್ ಅರಳಿ ಮರದ ಪಕ್ಕದಲ್ಲಿ ಗೋಡೆ ಎತ್ತರಿಸುವ ವಿಷಯ.

ಉತ್ತರ:- ವಾರ್ಡ್‌ನಲ್ಲಿ ಮುಂದೆ ಕೈಗೊಳ್ಳುವ ಕಾಮಗಾರಿಗಳಲ್ಲಿ ಸೇರಿಸಿ ಕೈಗೊಳ್ಳಲು ನಿರ್ಧರಿಸಲಾಯಿತು.

3. ಬಯಲು ರಂಗ ಮಂದಿರ ಪಕ್ಕದಲ್ಲಿ ಹಾವುಗಳು ಹೆಚ್ಚಾಗಿದ್ದು, ಅವುಗಳನ್ನು ತಡೆಯುವ ದೃಷ್ಟಿಯಿಂದ ತಡೆಗೋಡೆ ನಿರ್ಮಿಸುವ ವಿಷಯ.

ಉತ್ತರ:- ಸದರಿ ಬಯಲು ರಂಗ ಮಂದಿರ ನಿವೇಶನವು ಮಲ್ಲಸಂದ್ರ ಗುಟ್ಟೆ (ಸರ್ವೆ ನಂ.33) ಪ್ರದೇಶವಾಗಿದ್ದು, ಯೋಜನಾ ವಿಭಾಗಕ್ಕೆ ವಹಿಸಲಾಗಿದ್ದು, ಸದರಿ ವಿಷಯವನ್ನು ಯೋಜನಾ ವಿಭಾಗಕ್ಕೆ ತಿಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು.

4. ಹೊಸ ಬೀದಿದೀಪಗಳನ್ನು ಅಳವಡಿಸುವ ವಿಚಾರ.

ಉತ್ತರ:- ಸದರಿ ವಿಷಯವನ್ನು ವಿದ್ಯುತ್ ವಿಭಾಗಕ್ಕೆ ತಿಳಿಸಿ ಕ್ರಮಕೈಗೊಳ್ಳಲು ಸೂಚಿಸಲಾಯಿತು.

5. ಉದ್ಯಾನವನಗಳಲ್ಲಿ ದಿನಂಪ್ರತಿ ಕಸ ನಿರ್ವಹಣೆ ಸರಿ ಇರುವುದಿಲ್ಲ ಎಂಬ ವಿಷಯದ ಬಗ್ಗೆ.
ಉತ್ತರ:- ಸದರಿ ವಿಷಯವನ್ನು ತೋಟಗಾರಿಕಾ ವಿಭಾಗ ಹಾಗೂ ಉದ್ಯಾನವನಗಳ ನಿರ್ವಹಣೆದಾರರಾದ ಪ್ರಕಾಶ್ ರವರಿಗೆ ಕ್ರಮಕೈಗೊಳ್ಳಲು ಸೂಚಿಸಲಾಯಿತು.

2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-3726 ರಲ್ಲಿ ಅನುದಾನವನ್ನು ಹಂಚಿಕೆ ಮಾಡಿಕೊಂಡಿರುವಂತೆ ವಾರ್ಡ್ ನಂ.12 ರ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ಕ್ರಿಯಾ ಯೋಜನೆ ಪಟ್ಟಿಯನ್ನು ತಯಾರಿಸಿರುವ ಬಗ್ಗೆ.

ಶ್ರೀ ಸಿ.ಎನ್. ಜಗದೀಶ್, ವಾರ್ಡ್ ಸಂಖ್ಯೆ.13 ರ ಸಹಾಯಕ ಅಭಿಯಂತರರು ಮಾತನಾಡಿ 2022-23 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0472, ಪಿ-3572 ಹಾಗೂ ಪಿ-3726 ರಲ್ಲಿ ರೂ.613.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು, ಸದರಿ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿದರು.

| Sl No | Pcode | Ward No | Name of Work | Estimated cost in Lakhs |
|---|---|---|---|---|
| 1 | P-0472 | 13 | Maintenance and Improvements to Community Hall in Ward No.13 Dasarahalli Zone | 13.00 |
| 2 | P-3572 | 13 | M & R of Primary Health Centers and Upgradation and Providing Equipments to Dialysis Centre in Ward No.13, Dasarahalli Zone | 70.00 |
| 3 | P-3726 | 13 | Foot path repairs and maintenance work in ward no. 13, Mallasandra, in Shettyhalli Sub Division. | 30.00 |
| 4 | P-3726 | 13 | Comprehensive development works-1 in ward no 13 in shettyhalli sub division. | 50.00 |
| 5 | P-3726 | 13 | Desilting of Drains in ward no 13 in Shettyhalli sub division. | 50.00 |
| 6 | P-3726 | 13 | Comprehensive development of works-2 in ward no 13 Shettyhalli sub division. | 80.00 |
| 7 | P-3726 | 13 | Comprehensive development of works-3 in ward no 13 Shettyhalli sub division. | 80.00 |

| | | | | |
|---|---|---|---|---|
| 8 | P-3726 | 13 | Construction OF Samudaya Bhavana in Ward no 13 in Shettyhalli sub division. | 100.00 |
| 9 | P-3726 | 13 | Reasphalting and desilting of Roads in Pipeline road in ward no 13 in Shettyhalli sub division. | 80.00 |
| 10 | P-3726 | 13 | Reasphalting and desilting of Roads in Ward no 13 in Shettyhalli sub division. | 60.00 |
| | | | **Grand Total** | **613.00** |

ಸದರಿ ಕ್ರಿಯಾಯೋಜನೆಯನ್ನು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು.

ಈ ಮೇಲಿನ ಎಲ್ಲಾ ಅಂಶಗಳನ್ನು ತ್ವರಿತಗತಿಯಲ್ಲಿ ಬಗೆಹರಿಸಲು ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀ ವಿಶ್ವನಾಥ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿಭಾಗದ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು ಮತ್ತು ಮುಂದಿನ ಸಭೆಯಲ್ಲಿ ಈ ಬಗ್ಗೆ ಅನುಸರಣಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದರು ಮತ್ತು ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಯೊಂದಿಗೆ ಚರ್ಚಿಸಿ ಕೋವಿಡ್ ವ್ಯಾಕ್ಸಿನೇಷನ್, ಬೂಸ್ಟರ್ ಡೋಸ್ ಮತ್ತು ಡೆಂಗ್ಯೂ ಪ್ರಕರಣಗಳ ಬಗ್ಗೆ ಮಾಹಿತಿ ಪಡೆದರು. ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರಿಗೆ, ಅಧಿಕಾರಿಗಳಿಗೆ, ಸಾರ್ವಜನಿಕರಿಗೆ ಧನ್ಯವಾದಗಳನ್ನು ತಿಳಿಸುತ್ತಾ ವಾರ್ಡ್ ಸಭೆಯನ್ನು ಮುಕ್ತಾಯಗೊಳಿಸಿದರು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 13, ಮಲ್ಲಸಂದ್ರ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು, ವಾ.ನಂ.13, ಮಲ್ಲಸಂದ್ರ**
**ಮತ್ತು ತಹಶೀಲ್ದಾರ್, ಉಪ ಆಯುಕ್ತರು(ಭೂಸ್ವಾಧೀನ)**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧಿಕಾರಿಗಳ ಮಾಹಿತಿಗಾಗಿ:-**

1) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿ.ಬಿ.ಎಂ.ಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಆರೋಗ್ಯ ವೈಧ್ಯಾಧಿಕಾರಿಗಳು (ದಾಸರಹಳ್ಳಿ) ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ವಲಯ ಅರಣ್ಯಾಧಿಕಾರಿಗಳು, ದಾಸರಹಳ್ಳಿ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು (ಶೆ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಂದಾಯ ಅಧಿಕಾರಿ (ಶೆ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಕಳುಹಿಸಿದೆ.
11) ಹಿರಿಯ / ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 13 ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
12) ಕಛೇರಿ ಪ್ರತಿ.